

# ಖರದುಂಗ್ಲಾ

## ಅಲೌಕಿಕ ಅನುಭವದ ತಾಣ

ಪ್ರಕೃತಿಯ ಸೌಂದರ್ಯ, ರೌದ್ರತೆಯನ್ನು ಒಮ್ಮೆಗೇ ದರ್ಶನ ಮಾಡಿಸುವ ಲಡಾಖ್‌ನ ಖರದುಂಗ್ಲಾ ಪಾಸ್‌ಗೆ ಭೇಟಿ ನೀಡುವುದನ್ನು ಪ್ರವಾಸ ಎಂದಷ್ಟೇ ಕರೆದರಾದೀತೇ? ಆ ಪ್ರವಾಸ, ಜೀವ–ಜೀವನದ ಮತ್ತೊಂದು ಮಗ್ಗುಲನ್ನೂ ತೋರುವ ಅನುಭಾವವೂ ಹೌದು.

■ ಶ್ಯಾಮಲಾ ಗುರುಪ್ರಸಾದ್

ಲಡಾಖ್ ಪ್ರವಾಸ ಹೊರಡುವುದೆಂದು ನಾನು, ನನ್ನ ಪತಿ ನಿಶ್ಚಯಿಸಿದ ಕೂಡಲೇ ಅಲ್ಲಿನ ಲೇಹ್ ನಗರದ ಹೋಟೆಲುಗಳನ್ನು ಸಂಪರ್ಕಿಸತೊಡಗಿದೆವು. ನಾವು ತಂಗಲು ಆರಿಸಿಕೊಂಡ ಹೋಟೆಲಿನ ಮಾಲೀಕ, ಊರು ತಲುಪಿದ ದಿನದ ವಿಶ್ರಾಂತಿಯ ಅಗತ್ಯವನ್ನು ಒಂದೇ ಉಸಿರಿನಲ್ಲಿ ವಿವರಿಸಿದ್ದ. ಅಂದಿನವರೆಗೂ ಬರೀ ಕೇಳಿ ತಿಳಿದಿದ್ದ 'ಅಕ್ಲೈಮಟೈಸೇಷನ್' ನಮ್ಮದೇ ಅನುಭವಕ್ಕೆ ಬರುವ ಸಮಯ ನೆನೆದು ರೋಮಾಂಚನವೆನಿಸಿತು.

ಅಪರಿಚಿತ ಊರು, ಅಪರಿಚಿತ ಭಾಷೆ, ಅಪರಿಚಿತ ಜನ ಇವ್ಯಾವುವೂ ನಮಗೆ ಹೊಸದಲ್ಲ. ಆದರೆ ಅಪರಿಚಿತ ಹವಾಮಾನ!

ಸಮುದ್ರ ಮಟ್ಟದಿಂದ ಲಡಾಖ್ ಸುಮಾರು ಹತ್ತು ಸಾವಿರ ಅಡಿ ಎತ್ತರದಲ್ಲಿದೆ. ಈ ಎತ್ತರದಲ್ಲಿ ಆಮ್ಲಜನಕದ ಕೊರತೆ ಇದ್ದು, ಆ ವಾಯುಮಾನಕ್ಕೆ ಹೊಂದಿಕೊಳ್ಳುವುದೇ ಸವಾಲು. ಮನುಷ್ಯ ಹಾಗೂ ಪ್ರಕೃತಿ ನಡುವಿನ ಸೆಣಸಾಟ ಕಣ್ಣಿಗೆ ಗೋಚರಿಸುವುದು, ಅನುಭವಕ್ಕೆ ದಕ್ಕುವುದು ಇದೇ ಜಾಗದಲ್ಲಿ.

ಲಡಾಖಿನ 'ಖರದುಂಗ್ಲಾ ಪಾಸ್' ನನ್ನನ್ನು ತಲ್ಲಣಗೊಳಿಸಿದ ಬಗೆ ನಾನೆಂದಿಗೂ ಮರೆಯಲಾರೆ. ಒಂದೇ ನಾಣ್ಯದ ಎರಡು ಮುಖಗಳಂತಿರುವ ಪ್ರಕೃತಿಯ ಸೌಂದರ್ಯ ಹಾಗೂ ರೌದ್ರತೆಯನ್ನು ಒಂದೇ ನೋಟದಲ್ಲಿ ಕಂಡ ಆ ಕ್ಷಣ ಪದಗಳಿಗೂ ಮೀರಿದ ಅನುಭೂತಿ ಕೊಡುವಂಥದ್ದು! ಎಲ್ಲವನ್ನೂ ಜಯಿಸಬಲ್ಲೆ ಎಂಬ ಮನುಷ್ಯನ ಅಹಂ ಅನ್ನು ಕ್ಷಣಮಾತ್ರದಲ್ಲಿ ಮುರಿದು ಕೂರಿಸಬಲ್ಲ ನಿಸರ್ಗದ ನಿಜ ದರ್ಶನ ಮಾಡಿಸುವ ತಾಣವದು.

ವಿಮಾನ ಲೇಹ್ ಹತ್ತಿರವಿದ್ದಾಗ ಕಿಟಕಿಯಿಂದಾಚೆ ಕಣ್ಣಾಡಿಸಿದರೆ ಅದ್ಭುತ ಲೋಕ ತೆರೆದುಕೊಂಡಿತು. ಭೂಮಿಯನ್ನು ತಬ್ಬಿನಿಂತ ಕಂದುಬಣ್ಣದ ಪರ್ವತ ಶ್ರೇಣಿಗಳು ಹಿಮದ ಹೊದಿಕೆ ಹೊದ್ದು ನಿರಾಳ ಮಲಗಿದಂತೆ ಕಾಣುವ ಆ ದೃಶ್ಯ ಮುದ ನೀಡುತ್ತದೆ. ಹಿಮಾಚ್ಛಾದಿತ ಪರ್ವತಶ್ರೇಣಿ ಲಡಾಖಿನ ಅನಭಿಷಕ್ತ ದೊರೆ ಎಂದು ಅರ್ಥವಾಗಲು ಹೆಚ್ಚು ಸಮಯ ಬೇಕಾಗದು.

ಲೇಹ್ ಪಟ್ಟಣ ವಿಸ್ತಾರವಾದದ್ದು. ಊರು ತಲುಪಿದ ಮರುದಿನ ಕಾರ್ಗಿಲ್ ಯೋಧರ ಸ್ಮಾರಕ ಭವನ, ಲಡಾಖ್ ಆಳಿದ ಅರಸನ ಅರಮನೆ, ಸಿಖ್ಖರ

